# ಕಲಿಕಾಫಲ – 2

ಲಭ್ಯವಿರುವ ವಿವಿಧ ಪ್ರಕಾರದ ಸಾಹಿತ್ಯ ರಚನೆಗಳಾದ ಕವನ, ಕಥೆ, ಲೇಖನ ಮತ್ತು ನಾಟಕಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವರು.

## ಚಟುವಟಿಕೆ 1: "ನಮ್ಮ ಕನ್ನಡ ನಮ್ಮ ಹೆಮ್ಮೆ"

ನೀಡಲಾಗಿರುವ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಸಹಪಾಠಿಗಳ ಸಹಾಯದಿಂದ ಆಲಿಸಿ ಸರಿಯಾಗಿ ಅರ್ಥಮಾಡಿಕೊಳ್ಳೋಣ, ನೀಡಲಾದ ಪ್ರಶ್ನೆಗಳಿಗೆ ಉತ್ತರಿಸೋಣ.

### ಪಠ್ಯ 1

ಗರಿಕೆ ಚಿಗುರದ ನೆಲದಿ ಸಾರ ಉಳಿಯುವುದುಂಟೆ
ಹಸಿರು ಕಾಣದ ಹೊಲದಿ ಫಸಲು ಬೆಳೆದವರುಂಟೆ

ಮೊದಲು ಹೀಗಿರಲಿಲ್ಲ ಹಸಿರು ಉಸಿರಾಗಿತ್ತು
ಹದದ ಮಳೆಯಲಿ ಮಿಂದು ನೆಲವು ತಂಪಾಗಿತ್ತು
ಮುದವ ನೀಡುವ ನೋಟ ಕಣ್ಣ ಸೆಳೆಯುತಲಿತ್ತು
ಎದೆಯ ಹೊಲದಲಿ ಪೈರು ಫಸಲು ಸೊಂಪಾಗಿತ್ತು

ಕನಸು ತುಂಬಿದ ಕಣ್ಣು ಹೊಸತು ಅರಸುತಲಿತ್ತು
ಮನದ ಭಾವನೆಗಳಿಗೆ ರೆಕ್ಕೆ ಮೂಡುತಲಿತ್ತು
ದಿನವು ಹುಟ್ಟುವ ರವಿಯು ಬಾಳ ಕತ್ತಲೆ ಕಳೆದು
ಬಣ್ಣ ಬಣ್ಣದ ಬೆಳಕು ಕಣ್ಣ ತುಂಬುತಲಿತ್ತು

ಭಾವ ತುಂಬಿದ ಮನಸು ತೊನೆದು ತೂಗುತಲಿತ್ತು
ಜೀವದೊರತೆಯ ಸೆಲೆಗೆ ಪ್ರೀತಿ ಮೊಳೆಯುತಲಿತ್ತು
ಯಾವ ರಾಗವೊ ಏನೊ ಹೃದಯ ಹಾಡುತಲಿತ್ತು
ನೋವು ಇರಲೇ ಇಲ್ಲ ನಲಿವು ತುಳುಕುತಲಿತ್ತು

ಕ್ರೂರ ಮನಸಿನ ಜನರು ಹಾರೆ ಗುದ್ದಲಿ ತಂದು
ಪೈರು ಪಚ್ಚೆಯ ತುಳಿದು ಹಾಳು ಮಾಡಿದ ಮೇಲೆ
ಬರದ ಬರಸಿಡಿಲೆರಗಿ ಬೆಂದುಹೋಯಿತು ಫಸಲು
ಗರವು ಬಡಿದಂತಾಗಿ ಬಂಜರಾಯಿತು ಬದುಕು

– ಸುರೇಂದ್ರ ನಾಯ್ಕ್ ಬಿ

### ಪಠ್ಯ 2

**ಉತ್ತರ ಕುಮಾರ:** (ಸುಂದರಿಯರ ಮುಖಗಳನ್ನು ನೋಡುತ್ತಾ) ನಾನು ಯುದ್ಧಕ್ಕೆ ಬಂದರೆ ಆಯಿತು. ಕೌರವರ ಸೈನ್ಯ ಒಂದೇ ಕ್ಷಣದಲ್ಲಿ ನಾಶ. ಆ ಬುದ್ಧಿಗೇಡಿ ಕೌರವರಿಗೆ ಅಷ್ಟೂ ತಿಳಿಯಬೇಡವೇ? ಉತ್ತರಕುಮಾರನೆಂದರೆ ಅವರು ಏನೆಂದು ತಿಳಿದಿದ್ದಾರೆ ?

**ಗೋಪಾಲಕ:** ಹೌದು ಸ್ವಾಮಿ, ಮೂರು ಲೋಕಗಳಲ್ಲಿಯೂ ನಿಮ್ಮಂಥ ಶೂರರಿಲ್ಲ. ಕೌರವರಿಗೆ ಗೊತ್ತು ಈ ವಿಚಾರ!

**ಉತ್ತರ ಕುಮಾರ:** ಹೌದು. ಆ ಕೌರವರು ಮಲಗಿದ್ದ ಸಿಂಹವನ್ನು ಕೆರಳಿಸಿದ್ದಾರೆ. ಹಸಿದ ಹುಲಿಯನ್ನು ಕೆಣಕಿದ್ದಾರೆ. ಹುತ್ತದ ಬಾಯಿಗೆ ಕೈ ಹಾಕಿದ್ದಾರೆ. ಹೂಂ! ಈಗ ನಾನು ಯುದ್ಧಕ್ಕೆ ಹೊರಡಬೇಕು. ಎಲೈ ಗೋಪಾಲಕನೇ, ಕೌರವರ ಕಡೆ ಯಾರು ಯಾರು ಬಂದಿದ್ದಾರೆ?

**ಗೋಪಾಲಕ:** ಸ್ವಾಮಿ.... ಕೌರವರ ಕಡೆಯಿಂದ ಭೀಷ್ಮ, ದ್ರೋಣ, ಕರ್ಣ ಮೊದಲಾದವರೆಲ್ಲಾ ಬಂದಿದ್ದಾರೆ.

**ಉತ್ತರ ಕುಮಾರ:** ನಾನೀಗ ಅಲ್ಲಿ ಯಾರೊಡನೆ ಯುದ್ಧ ಮಾಡಬೇಕು. ನನಗೆ ಎದುರಾಗಿ ನಿಲ್ಲುವವರು ಇವರಲ್ಲಿ ಯಾರಿದ್ದಾರೆ?

**ಉತ್ತರೆ:** ಅಣ್ಣಾ, ನೀನು ಕೌರವರ ಸೈನ್ಯದ ಮುಖಂಡನಾದ ಭೀಷ್ಮನೊಡನೆ ಯುದ್ಧ ಮಾಡು. ಅವನನ್ನು ಸೋಲಿಸು.

**ಉತ್ತರ ಕುಮಾರ:** ಛೆ! ಛೆ! ಅವನೊಬ್ಬ ಮುದುಕ. ನಾನೋ ನವಯುವಕ!

**ಉತ್ತರೆ:** ಹಾಗಾದರೆ ಅಣ್ಣ ದ್ರೋಣರೊಂದಿಗೆ ಯುದ್ಧ ಮಾಡು.

**ಉತ್ತರ ಕುಮಾರ:** ನಾನಾದರೋ ಕ್ಷತ್ರಿಯ ವೀರ. ಅವನೋ ಬ್ರಾಹ್ಮಣ. ಅವನೊಡನೆ ಯುದ್ಧ ಮಾಡುವುದೇ? ಇಂಥವನನ್ನು ಕೊಂದು ನಾನು ಯಾವ ಪಾಪ ಕಟ್ಟಿಕೊಳ್ಳಲಿ.

**ಉತ್ತರೆ:** ಹಾಗಾದರೆ ಮಹಾ ಶೂರನೆಂದು ಖ್ಯಾತಿ ಪಡೆದಿರುವ ಕರ್ಣನನ್ನಾದರೂ ಸೋಲಿಸು.

**ಉತ್ತರ ಕುಮಾರ:** (ಗಹಗಹಿಸಿ ನಗುತ್ತಾ) ಛೆ! ಛೆ! ಅವನು ಸೂತಪುತ್ರ.

**ಉತ್ತರೆ:** ಹಾಗಾದರೆ, ಕೌರವರ ಸೈನ್ಯದ ಮೇಲೆಯೇ ದಾಳಿ ಮಾಡಿಬಿಡು.

**ಉತ್ತರ ಕುಮಾರ:** ಮೂಕಪ್ರಾಣಿಗಳ ಮೇಲೆ ದಾಳಿ ಮಾಡಿದ ಆ ಕೌರವರ ಸೈನ್ಯ ಅದೆಂತಹ ಸೈನ್ಯ?

**ಉತ್ತರೆ:** ಅಣ್ಣ ನಿನ್ನಂಥ ವೀರಾಧಿವೀರರು ಯಾರೂ ಇಲ್ಲ. ಬೇಗನೆ ಯುದ್ಧಕ್ಕೆ ಹೋಗಿ ನಮ್ಮ ಗೋವುಗಳನ್ನು ಬಿಡಿಸಿಕೊಂಡು ಬಾ.

## ಪಠ್ಯ 3

ನಮ್ಮ ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲುಕುಡಿ ಎಂಬ ಗಿಡವಿದೆ. ಬೂದು ಬಣ್ಣದ ಗಿಡದ ಎಳೆ ಚಿಗುರು ಪೂಜಾರತಿಗೆ ಬಳಕೆ! ಎಳೆಯ ಕುಡಿ ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯನ್ನು ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಇದು ಎಣ್ಣೆಯನ್ನು ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗಿತ್ತು. ಅಂದರೆ ಹತ್ತಿ ಬೆಳೆಯದ ಮಲೆನಾಡಿನಲ್ಲಿ ಕಾಡುಗಿಡದ ಎಳೆಚಿಗುರು ದೀಪದ ಕುಡಿಯಾಗಿತ್ತು. ಇದಲ್ಲದೇ ಅಡಿಕೆ, ತೆಂಗಿನ ತೋಟ, ಹಳ್ಳದಂಚುಗಳಲ್ಲಿ ನಾಗಸಂಪಿಗೆ ಮರಗಳಿದ್ದವು. ಅವುಗಳ ಬೀಜ ಸಂಗ್ರಹಿಸಿ ದೀಪಕ್ಕೆ ಬಳಕೆ. ಇದರ ಹಸಿಬೀಜಗಳಲ್ಲಿ ಎಣ್ಣೆಯ ಅಂಶ ಜಾಸ್ತಿಯಿರುವುದರಿಂದ ಚೆನ್ನಾಗಿ ಉರಿಯುತ್ತದೆ. ದೀಪಾವಳಿ, ಕಾರ್ತೀಕ ಮಾಸದಲ್ಲಿ ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿ ಒಂದೆರಡು ಜವಾರಿ ಹತ್ತಿ ಗಿಡಗಳಿರುತ್ತಿದ್ದವು. ಅವು ಹಲವು ವರ್ಷಗಳಿಂದ ಬೆಳೆಯುತ್ತ ಹೂವರಳಿಸುತ್ತ ಹತ್ತಿ ನೀಡುತ್ತಿದ್ದವು. ಈ ಹತ್ತಿಯನ್ನು ದೀಪಕ್ಕೆ ಬಳಸುವ ಪರಿಪಾಠವಿತ್ತು. ಒಟ್ಟಿನಲ್ಲಿ ಪೇಟೆ ಖರೀದಿಯ ಯಾವ ಅಗತ್ಯವಿಲ್ಲದೇ ಹಬ್ಬದ ದೀಪ ಬೆಳಗುವ ಸುಲಭ ಅವಕಾಶಗಳಿದ್ದವು.

– ಶಿವಾನಂದ ಕಳವೆ

1. ಮೊದಲನೇ ಪಠ್ಯವು ಯಾವ ಸಾಹಿತ್ಯ ಪ್ರಕಾರವಾಗಿದೆ? ಅದರ ವಿಶೇಷತೆಗಳನ್ನು ಗುರುತಿಸಿ.

ಮೊದಲನೇ ಪಠ್ಯವು ಪದ್ಯ ಪ್ರಕಾರದ ಸಾಹಿತ್ಯವಾಗಿದೆ. ಇದನ್ನು ಕವನ ಸಾಹಿತ್ಯ ಎಂದು ಕೂಡ ಕರೆಯುತ್ತಾರೆ ಇದರ ವಿಶೇಷತೆ ಏನೆಂದರೆ ಇದು ಕಡಿಮೆ ಸಮಯದಲ್ಲಿ ಅಥವಾ ಕಡಿಮೆ ಜಾಗದಲ್ಲಿ ಭಾವನೆಗಳನ್ನು ಮತ್ತು ಕವಿಯ ದೃಷ್ಟಿಕೋನವನ್ನು ವ್ಯಕ್ತಪಡಿಸುವ ಒಂದು ಮಾಧ್ಯಮವಾಗಿದೆ. ದೀರ್ಘವಾದ ಓದಿಗಿಂತ ಕಡಿಮೆ ಓದಿನಲ್ಲಿ ಭಾವನೆಯನ್ನು ವ್ಯಕ್ತಪಡಿಸುವುದು ಮತ್ತು

2. ಎರಡನೇ ಪಠ್ಯವು ಯಾವ ಸಾಹಿತ್ಯದ ಪ್ರಕಾರವಾಗಿದೆ? ಅದರ ವಿಶೇಷತೆಗಳನ್ನು ಗುರುತಿಸಿ.

ಎರಡನೇ ಪಠ್ಯವೂ ನಾಟಕ ಸಾಹಿತ್ಯದ ಪ್ರಕಾರವಾಗಿದೆ ಇದರಲ್ಲಿ ಸಂಭಾಷಣೆ ಇರುತ್ತದೆ. ವ್ಯಕ್ತಿಗಳು ಪಾತ್ರಗಳು ಪಾತ್ರಗಳಿಗೆ ತಕ್ಕಂತಹ ಸನ್ನಿವೇಶಗಳು ಮತ್ತು ಪಾತ್ರಗಳ ಮಾತುಗಳು ಇದರಲ್ಲಿ ವ್ಯಕ್ತವಾಗುತ್ತವೆ ಇದರಿಂದ ಸಮಾಜಕ್ಕೆ ಉತ್ತಮ ಸಂದೇಶ ನೀಡಬಹುದು.

3. ಮೂರನೆಯ ಪಠ್ಯವು ಯಾವ ಸಾಹಿತ್ಯದ ಪ್ರಕಾರವಾಗಿದೆ? ಅದರ ವಿಶೇಷತೆಗಳನ್ನು ಗುರುತಿಸಿ.

ಮೂರನೇ ಪಠ್ಯವು ಗದ್ಯ ಪ್ರಕಾರವಾಗಿದೆ. ಈ ಪ್ರಕಾರದಲ್ಲಿ ಹೇಳಬೇಕಾದ ವಿಷಯವನ್ನು ಸಂಪೂರ್ಣವಾಗಿ ದೀರ್ಘವಾಗಿ ವಾಕ್ಯಗಳ ಮೂಲಕ ಪ್ರಶ್ನೆಗಳ ಮೂಲಕ ತಿಳಿಸುತ್ತಾರೆ ಕವಿಯು ಯಾವ ವಿಷಯದ ಬಗ್ಗೆ ಹೇಳಬೇಕಾಗಿದೆ ತಿಳಿಸುತ್ತಾನೆ ಇದೆ ಗದ್ಯ ಪ್ರಕಾರವಾಗಿದೆ.

4. ಇದರಲ್ಲಿ ನಿಮಗೆ ಇಷ್ಟವಾದ ಸಾಹಿತ್ಯದ ಪ್ರಕಾರ ಯಾವುದು? ಏಕೆ ಎನ್ನುವುದನ್ನು ನಿಮ್ಮದೇ ಮಾತುಗಳಲ್ಲಿ ವ್ಯಕ್ತಪಡಿಸಿ.

ಇದರಲ್ಲಿ ನಮಗೆ ಇಷ್ಟವಾದ ಸಾಹಿತ್ಯದ ಪ್ರಕಾರ ಎಂದರೆ ಪದ್ಯ ಪ್ರಕಾರ ಏಕೆಂದರೆ ಪದ್ಯವೂ ಬೇಗ ಓದಬಹುದು ಮತ್ತು ಬೇಗ ಭಾವನೆಗಳನ್ನು ತಿಳಿದುಕೊಳ್ಳಬಹುದು. ರಚನೆಯು ಸುಲಭ ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಉತ್ತಮವಾಗಿರುವ ಮಾಧ್ಯಮವಾಗಿದೆ.

ಚಟುವಟಿಕೆ 2: ಕಥೆ ಎಂದರೆ ನಿಮಗಿಷ್ಟ ಅಲ್ವಾ !

ಇಲ್ಲಿ ಅರ್ಧ ಕಥೆ ನೀಡಿದೆ. ಅದನ್ನು ನಿಮ್ಮ ಸಹಪಾಠಿಯ ಸಹಾಯದಿಂದ ಕೇಳಿಸಿಕೊಳ್ಳಿ. ನಂತರ ಉಳಿದ ಅರ್ಧ ಕಥೆಯನ್ನು ಪೂರ್ಣಗೊಳಿಸಿ.

## ಪಾರಿವಾಳ ಮತ್ತು ಇರುವೆ

ಒಂದಾನೊಂದು ಕಾಲದಲ್ಲಿ ಕಾಡಿನ ಗೂಡಿನಲ್ಲಿ ಇತ್ತೊಂದು ಪುಟ್ಟ ಪಾರಿವಾಳ. ಏಕಾಂಗಿಯಾಗಿದ್ದ ಒಂದು ಇರುವೆ ಒಂದು ದಿನ ನದಿ ನೀರಲ್ಲಿ ಬಿದ್ದಿತ್ತು. ಆ ಜೀವ ಹೋರಾಟದಲ್ಲಿತ್ತು. ಈ ಹಕ್ಕಿಯು ಅದನ್ನು ನೋಡಿತು. ಕಡ್ಡಿಗಳ ಕೀಳುತ್ತಾ ನದಿ ನೀರಲ್ಲಿ ಹಾಕಿತು. ಆ ಕಡ್ಡಿಯೇರಿ ಇರುವೆ ತೇಲಿ ದಡ ಸೇರಿತು. ನೆರವಿಗೆ ಋಣಿಯಾಗಿರುವೆ ಎಂದು ನುಡಿಯಿತು. ಒಂದು ದಿನ............

ಒಬ್ಬ ಬೇಟೆಗಾರನು ಮರದ ಮೇಲೆ ಕುಳಿತಿದ್ದ ಪಾರಿವಾಳವನ್ನು ನೋಡಿದನು. ಪಾರಿವಾಳವು ಬೇರೆ ಕಡೆಗೆ ಗಮನ ಮಾಡಿತ್ತು ಆಗ ಬೇಟೆಗಾರನು ಪಾರಿವಾಳಕ್ಕೆ ತನ್ನ ಬಿಲ್ಲು ಬಾಣದಿಂದ ಗುರಿ ಇಟ್ಟನು ಅಷ್ಟರಲ್ಲಿ ಇರುವೆಯು ಬೇಟೆಗಾರನು ಪಾರಿವಾಳವನ್ನು ನೋಡಿತು ತಕ್ಷಣ ತಡ ಮಾಡದೆ ಬೇಟೆಗಾರನ ಕಾಲನ್ನು ಹತ್ತಿ ಕಾಲಿಗೆ ಕಚ್ಚಿತು ಆಗ ಬೇಟೆಗಾರನ ಗುರಿ ತಪ್ಪಿ ಬಾಣ ಬೇರೆ ಕಡೆಗೆ ಹೋಯಿತು ಪಾರಿವಾಳದ ಜೀವ ಉಳಿದು, ಬಾಣದ ಸಪ್ಪಳದಿಂದ ಪಾರಿವಾಳ ಹಾರಿ ಹೋಗಿ ಹಾರಿಹೋಯಿತು ತದನಂತರ ಇರುವೆಗೆ ಪಾರಿವಾಳ ಧನ್ಯವಾದ ಹೇಳಿತು.

---

ಚಟುವಟಿಕೆ 3: ಕೆಳಗಿನ ಸಂಭಾಷಣೆಯನ್ನು ಕಥೆಯಾಗಿ ಪರಿವರ್ತಿಸಿರಿ.

(ಸಂಚಿತ್, ಚಿನ್ಮಯಿ, ಅಶ್ವಘೋಷ, ಕಿರಣ್ಮಯಿ, ತನ್ವಿತಾ ಇವರುಗಳು ಬೇಸಿಗೆ ರಜೆಯಲ್ಲಿ ತಮ್ಮ ತಮ್ಮ ಅಜ್ಜ ಅಜ್ಜಿಯ ಊರಿಗೆ ತೆರಳಿ, ಮರಳಿ ಬಂದು ಅನುಭವಗಳನ್ನು ಶಾಲಾ ಪ್ರಾರಂಭದ ದಿನ ಪರಸ್ಪರ ಹಂಚಿಕೊಳ್ಳುವರು.)

**ಅಶ್ವಘೋಷ** : ಹೇ, ಇಲ್ಲಿ ನೋಡೋ. ನಮ್ಮ ಅಜ್ಜಿ ಊರಲ್ಲಿ ಕೆರೆ ಹತ್ತಿರ ಮೀನು ಹಿಡಿಯುವವರ ಬಲೆ ಎತ್ತಿಕೊಂಡು ಓಡಿ ಹೋಗಿ ಬಿಟ್ಟೆ, ಅಬ್ಬಬ್ಬಾ! ಅವರು ನಮ್ಮನ್ನು ಓಡಿಸಿಕೊಂಡು ಬಂದರು. ಎಂಥ ಮಜಾ ಇತ್ತು ಗೊತ್ತಾ?

**ಸಂಚಿತ್** : ಹೌದೇನೋ, ಮತ್ತೆ ಅವರು ನಿಮಗೆ ಏನು ಮಾಡಲಿಲ್ಲವಾ?

**ಚಿನ್ಮಯಿ** : ಇವನು ಅವರ ಕೈಗೆ ಸಿಕ್ಕಿಲ್ಲ. ಸಿಕ್ಕಿದ್ದರೇ ಅಶ್ವಘೋಷಗೆ ಸರಿಯಾಗಿ ಪೆಟ್ಟು ಬೀಳುತ್ತಾ ಇದ್ದವು.

**ತನ್ವಿತಾ** : ಚಿನ್ನು ನೀನು ನಿಮ್ಮ ಅಜ್ಜಿ ಊರಿಗೆ ಹೋಗಿದೆಯಲ್ಲಾ ಏನೇನು ಮಾಡಿದೆ?

**ಕಿರಣ್ಮಯಿ** : ಇವಳಾ? ಮನೆ ಬಿಟ್ಟು ಎಲ್ಲಿಗೂ ಹೋಗಿರಲ್ಲ. ಸುಮ್ಮನೆ ಕುತ್ಕೊಂಡು ಟಿ.ವಿ. ನೋಡ್ತಾ ಇರುತ್ತಾಳೆ. ಅಲ್ವಾ ಚಿನ್ನು?

**ಚಿನ್ಮಯಿ** : ಹೇ ಇಲ್ಲ ಕಣ್ರೇ. ನಮ್ಮ ಅಜ್ಜಿ ಜೊತೆ ನಾನು ಚೌಕಾ ಬಾರಾ ಆಟವನ್ನು ಆಡುವುದನ್ನು ಕಲಿತೆ. ಹೇ ಮತ್ತೇನು ಗೊತ್ತಾ? ನಮ್ಮ ಅಜ್ಜಿ ಹತ್ತಿರ ಅಳುಗುಳಿಮಣೆ ಆಟದ ಬಾಕ್ಸ್ ಇದೆ. ಅದರಲ್ಲಿ ಆಡೋಕೆ ಎಷ್ಟು ಮಜಾ ಗೊತ್ತಾ?

**ಸಂಚಿತ್** : ಹೇ ಬಿಡ್ರೋ ಬರೀ ನಿಮ್ಮದೇ ಹೇಳುತ್ತೀರಾ. ನಾನು ಏನು ಆಟ ಆಡಿದೆ ಅಂತಾ ಯಾರು ಕೇಳುತ್ತಿಲ್ಲ.

**ಅಶ್ವಘೋಷ** : ಸರಿ ಸಂಚಿತ್. ನೀನು ನಿಮ್ಮ ಅಜ್ಜಿ ಊರಲ್ಲಿ ಯಾವ ಯಾವ ಆಟ ಆಡಿದೆ?

**ಚಿನ್ಮಯಿ** : ಇವನು ಏನು ಆಟ ಆಡಿರುವುದಿಲ್ಲಾ. ಬರೀ ಅವರ ಮಾವನ ಜೊತೆ ಬೈಕ್‌ನಲ್ಲಿ ಸುತ್ತಿರುತ್ತಾನೆ.

**ಸಂಚಿತ್** : ಇಲ್ಲ ಕಣೇ ಚಿನ್ಮಯಿ. ನಮ್ಮ ಮಾವನ ಮಗಳು ಜೊತೆ ಕುಂಟೇ-ಪಿಲ್ಲೆ ಆಟ ಆಡೋದಾ ಕಲಿತೆ ಮತ್ತು ಅಕ್ಕ-ಪಕ್ಕದ ಹುಡುಗರ ಜೊತೆ ಸೇರಿ ಗೋಲಿ, ಬುಗುರಿ ಹಾಗೂ ಮರಕೋತಿ ಆಟ ಕೂಡ ಆಡಿದೆ ಗೊತ್ತಾ?

**ತನ್ವಿತಾ** : ಹೇ ಸ್ಕೂಲ್ ಟೈಂ ಆಯ್ತು. ಬನ್ನಿರೋ ಎಲ್ಲರೂ ಪ್ರಾರ್ಥನೆ ಸಭೆಗೆ ಹೋಗೋಣ. ಮಧ್ಯಾಹ್ನ ಊಟಕ್ಕೆ ಬಿಟ್ಟಾಗ ಮಾತಾಡೋಣ.

(ಎಲ್ಲಾ ಸ್ನೇಹಿತರು ಪ್ರಾರ್ಥನೆ ಸ್ಥಳಕ್ಕೆ ಬಂದು ಸೇರುವರು)

ಸಂಚಿತ್ ಚಿನ್ಮಯಿ ಅಶ್ವಘೋಷ ತನ್ವಿತ ಮತ್ತು ಇವರು ವಿದ್ಯಾರ್ಥಿಗಳು ರಜಾ ದಿನಗಳಲ್ಲಿ ತಮ್ಮ ಅಜ್ಜಿ ಮನೆಗಳಲ್ಲಿ ಉಂಟಾದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅಶ್ವಘೋಷಣೆ ಮೀನು ಹಿಡಿಯುವವರ ಬಲೆ ಕದ್ದ ಅನುಭವವನ್ನು ಹೇಳಿದ ಸಂಚಿತ್ ಅವರ ಅಜ್ಜಿ ಮನೆಯಲ್ಲಿ ಕುಂಟೆಬಿಲ್ಲೆ ಗೋಲಿ ಬುಗುರಿ ಆಟ ಆಡಿದ ಬಗ್ಗೆ ಮರಕೋತಿ ಆಟ ಆಡಿದ ಬಗ್ಗೆ ಅನುಭವ ಹಂಚಿಕೊಂಡಳು ಅಷ್ಟರಲ್ಲಿ ಸ್ಕೂಲ್ ಟೈಮ್ ಆಗಿ ಎಲ್ಲರೂ ಮಧ್ಯಾಹ್ನದ ಸಮಯದಲ್ಲಿ ಮಾತನಾಡಿಕೊಳ್ಳಲು ನಿಶ್ಚಯಿಸಿ ಎಲ್ಲರೂ ತೆರಳಿದರು.

ಚಟುವಟಿಕೆ 4: ಈ ವೀಡಿಯೋ ನಾಟಕವನ್ನು ನೋಡಿ–ಕೇಳಿ, ಅಭಿಪ್ರಾಯ ಹೇಳಿ.

(ಪಾಮು ಬಾಮು ನಾಟಕ)

ಚಟುವಟಿಕೆ 5: ಪದ್ಯ ಓದೋಣ, ಅರ್ಥ ಬರೆಯೋಣ.

(ಪದ್ಯವನ್ನು ಮನನ ಮಾಡಿಕೊಂಡು ಅದರ ಅರ್ಥವನ್ನು ನೀವೇ ಬರೆಯಿರಿ)

ಜೀವನದ ಸಾಗರದಿ ಸಾಗುತಿದೆ ಈ ಪಯಣ
ಗೊತ್ತಿರದ ಗುರಿಯಿರದ ಬಾಳನೌಕೆಯ ಯಾನ
ತೇಲುತಿದೆ ವಾಲುತಿದೆ ಮನಬಂದ ಕಡೆಗಳಲಿ
ಸೇರುತಿದೆ ನಿಲ್ಲುತಿದೆ ಅಪರಿಚಿತ ತಾಣದಲಿ

ಸೋತಿಹುದು ಸಂಬಂಧ ಸತ್ತಿಹುದು ಅನುಬಂಧ
ಕಾಡಿಹುದು ನೋವುಗಳು ಸಹಿಸಿದೆವು ನಾವುಗಳು
ಕೊರಗಿದರೆ ಮರಳುವುದೇ ಕಳೆದಿರುವ ಕ್ಷಣಗಳು
ನರಳಿದರೆ ಉಳಿಯುವುದೆ ಕಿತ್ತಿರುವ ತಂತುಗಳು

ನಾವೆ ಮುಳುಗಿದರೇನು ಬಾಳು ಮುಗಿಯುವುದೇನು
ಈಸೋಣ ಜಯಿಸೋಣ ಜೊತೆ ಸೇರಿ ಸಾಗೋಣ

– ಸುರೇಂದ್ರ ನಾಯ್ಕ್, ಬ

ಸಾಗರದಲ್ಲಿ ನೌಕೆಯು ಪಯಣ ಮಾಡುತ್ತಿದೆ ಅದಕ್ಕೆ ಗೊತ್ತಿಲ್ಲ ಗುರಿಯಿಲ್ಲ ಮನ ಬಂದ ಕಡೆ ವಾಲಿ ಅಪರಿಚಿತ ತಾಣದಲ್ಲಿ ನಿಲ್ಲುತಿದೆ. ಅದೇ ರೀತಿ ಜೀವನದಲ್ಲಿ ಬಾಳೆಂಬ ನೌಕೆಯು ಸಾಗುತ್ತಿದೆ.ಸಂಬಂಧಗಳು ಅನುಬಂಧಗಳು ಈಗ ಉಳಿದಿಲ್ಲ. ಎಷ್ಟೇ ನೋವುಗಳಿದ್ದರು ಕೊರಗದೆ ನರಳದೆ ಬಾಳಬೇಕು.ನಾವು ಸತ್ತರೂ ಬಾಳು ಮುಗಿಯುವುದಿಲ್ಲ. ಆದುದರಿಂದ ಬಾಳು ಮುಗಿಯುವದರೊಳಗೆ ಒಳ್ಳೆಯ ಕೆಲಸ ಮಾಡಬೇಕು ಎನ್ನುವ ಆಶಾವಾದ ಕವಿಯದ್ದಾಗಿದೆ.

ಚಟುವಟಿಕೆ 6: ಚಿತ್ರಗಳೆರಡನ್ನು ಹೋಲಿಸಿ ಪದ್ಯ ರಚಿಸೋಣ.







ನೋಡಲ್ಲಿ ಮೌಂಟ್ ಎವರೆಸ್ಟ್
ಏರಿದನು ಅದನ್ನು ತೇನ ಸಿಂಗ
ಮಾನವನ ಮುಂದೆ ಯಾವ ಎತ್ತರವು ನಿಲ್ಲದು
ನೋಡಲ್ಲಿ ಕಾಡು ಮೆಡುಗಳ ನದಿಗಳ ತೊರೆಗಳ
ದೇವರು ಕಣ್ಣಿತ್ತ ಏಕೆ ಇವನೆಲ್ಲ ನೋಡೋಕೆ
ಈ ಎಲ್ಲ ಸೊಬಗ ಸವಿಯೋಕೆ
ಇದೇ ನೋಡು ಭೂಮಿಯ ಮೇಲಿನ ಸ್ವರ್ಗ





ಎಲೆ ಹುಲ್ಲೆ ಪಕ್ಕದಲ್ಲಿ ಇದೆ ಹಸು
ಅದಕ್ಕೆ ನೀನೇ ಆಹಾರ
ಎಲೆ ಹಸುವೆ ನಿನ್ನ ಮುಂದೆ ಇದೆ
ಹುಲ್ಲು ನಿನಗೆ ಆಹಾರ
ಹುಲ್ಲನ್ನು ತಿಂದು ನಮಗೆ ಹಾಲನ್ನು ನೀಡು
ಹುಲ್ಲು ಬೆಳೆದಿರುವುದು ನಿನಗೆ
ಹಾಲು ಬರುತ್ತಿರುವುದು ನಮಗೆ





ಆ ದೇವ ಬಾಯಿಯೊಳಗೆ 32 ಹಲ್ಲಿಟ್ಟ
ಬಿದ್ದುಹೋಗುವ ಹಲ್ಲು ತೋರಿಸಲು ಇವ ಹಲ್ಲು ಕಿರಿದ
ಅಲ್ಲಿರುವವರೆಗೆ ಜಗಿ ನೀನು
ಹಲ್ಲಿರುವವರೆಗೆ ಸಿಗಿ ನೀನು
ಹಲ್ಲಿಲ್ಲದವನಿಗೆ ಕೇಳು ಹಲ್ಲಿನ ಮಹತ್ವ
ಆಹಾ ಈ ಚಿತ್ರದ ಹಲ್ಲು ಎಷ್ಟು ಸ್ವಚ್ಛ
ಆಹಾ ಇರಲಿ ಹೀಗೆ ಹಲ್ಲು ನಿತ್ಯ

ಚಟುವಟಿಕೆ 7: ಸಂಭಾಷಣೆ ಬರೆಯೋಣ.

**ಕಥೆಯನ್ನು ಗಮನಿಸಿ, ಅದನ್ನು ಸಂಭಾಷಣಾ ರೂಪದಲ್ಲಿ ಬರೆಯಿರಿ.**

## ಅಭ್ಯಾಸ ಬಲ

ಒಂದಾನೊಂದು ಊರಿನಲ್ಲಿ ಓರ್ವ ಕುಂಬಾರನಿದ್ದನು. ಅವನು ಊರ ಹೊರಗಿನ ಗುಡ್ಡದಿಂದ ತನಗೆ ಬೇಕಾದ ಮಣ್ಣನ್ನು ತಂದು ಮಡಕೆ ಮಾಡುತ್ತಿದ್ದನು. ಹೀಗೆ ಮಣ್ಣನ್ನು ತರಲು ಅವನು ಒಂದು ಕತ್ತೆಯನ್ನು ಇರಿಸಿಕೊಂಡಿದ್ದನು. ನಡುದಾರಿಯಲ್ಲಿ ಆತ ಕತ್ತೆಯನ್ನು ಮರಕ್ಕೆ ಕಟ್ಟಿಹಾಕಿ ವಿಶ್ರಾಂತಿ ಪಡೆಯುತ್ತಿದ್ದನು. ಒಂದು ದಿನ ಆತ ಕತ್ತೆಯೊಡನೆ ಬರುವಾಗ ಕತ್ತೆಯನ್ನು ಕಟ್ಟುವ ಹಗ್ಗವನ್ನು ತರಲಿಲ್ಲ.

ನಡುದಾರಿಯಲ್ಲಿ ವಿಶ್ರಾಂತಿ ಪಡೆಯಲು ಅವನಿಗೆ ತುಂಬಾ ಕಷ್ಟವಾಯಿತು. ಮರಕ್ಕೆ ಕಟ್ಟದಿದ್ದರೆ ಕತ್ತೆ ಓಡಿ ಹೋಗುತ್ತದೆ ಎಂಬ ಭೀತಿ ಅವನದು. ಆದರೂ ಆತ ಕತ್ತೆಯ ಕಿವಿ ಹಿಡಿದುಕೊಂಡು ಮಲಗಲು ಪ್ರಯತ್ನಿಸಿದ. ಇದರಿಂದ ಅವನಿಗೂ ವಿಶ್ರಾಂತಿ ಪಡೆಯಲಾಗಲಿಲ್ಲ. ಕತ್ತೆಗೂ ಇದರಿಂದ ಅನುಕೂಲವಾಗಲಿಲ್ಲ. ಆಗ ಅದೇ ದಾರಿಯಲ್ಲಿ ಸಾಗುತ್ತಿದ್ದ ಓರ್ವ ಪಂಡಿತ ಇವನ ಕಷ್ಟವನ್ನು ಗಮನಿಸಿದ. "ನಿನ್ನ ತೊಂದರೆ ಏನು?" ಎಂದು ಕೇಳಿದ. ಕುಂಬಾರ ತನ್ನ ಗೋಳನ್ನು ತೋಡಿಕೊಂಡ. "ಹಗ್ಗವಿಲ್ಲದಿರುವುದರಿಂದ ಕತ್ತೆಯನ್ನು ಕಟ್ಟಿ ಹಾಕಲು ಆಗುತ್ತಿಲ್ಲ. ಹೀಗಾಗಿ ತನಗೆ ವಿಶ್ರಾಂತಿ ಪಡೆಯಲು ಆಗುತ್ತಿಲ್ಲ" ಎಂದು ಕುಂಬಾರ ಪಂಡಿತನಲ್ಲಿ ಹೇಳಿಕೊಂಡ. ಆಗ ಪಂಡಿತ ಅವನಿಗೆ ಒಂದು ಉಪಾಯ ಸೂಚಿಸಿದ. "ನೀನು ಎಂದಿನಂತೆ ಕತ್ತೆಯನ್ನು ಅದರ ಜಾಗದಲ್ಲಿ ಒಯ್ದು ನಿಲ್ಲಿಸು ಹಾಗೂ ಹಗ್ಗದಿಂದ ಅದನ್ನು ಕಟ್ಟಿದ ಹಾಗೆ ಮಾಡು" ಎಂದನು. ಕುಂಬಾರ ಕತ್ತೆಯನ್ನು ಮರದ ಬಳಿ ತೆಗೆದುಕೊಂಡು ಹೋಗಿ ನಿಲ್ಲಿಸಿದ. ಹಾಗೂ ಅದರ ಕುತ್ತಿಗೆಗೆ ಹಗ್ಗದ ಕುಣಿಕೆ ಹಾಕಿದ ಹಾಗೆ ಮಾಡಿದ. ಆ ಕುಣಿಕೆಯ ಇನ್ನೊಂದು ತುದಿಯನ್ನು ಮರಕ್ಕೆ ಕಟ್ಟಿದ. ಕತ್ತೆ ಅದರ ಜಾಗದಲ್ಲಿ ವಿಶ್ರಾಂತಿ ಪಡೆಯಿತು. ಕುಂಬಾರ ಮಲಗಿಕೊಂಡ.

ಆದರೆ ಕುಂಬಾರ ಮನೆಗೆ ಹೊರಟಾಗ ಕತ್ತೆ ಏನು ಮಾಡಿದರೂ ಅದರ ಜಾಗದಿಂದ ಕದಲಲಿಲ್ಲ. ಕತ್ತೆಯನ್ನು ಹೊಡೆದು ಬಡಿದು ಅಲ್ಲಿಂದ ಕರೆದುಕೊಂಡು ಹೋಗಲು ಕುಂಬಾರ ಪ್ರಯತ್ನಿಸಿದ. ಆದರೆ ಕತ್ತೆ ತಾನಿದ್ದ ಜಾಗದಿಂದ ಕದಲಲಿಲ್ಲ. ಆಗ ಮತ್ತೆ ಅದೇ ದಾರಿಯಲ್ಲಿ ಆ ಪಂಡಿತ ಕಾಣಿಸಿಕೊಂಡ. ಕುಂಬಾರ ಆ ಪಂಡಿತನ ಬಳಿ ಹೋಗಿ ಮತ್ತೆ ತನ್ನ ಕಷ್ಟ ಹೇಳಿಕೊಂಡ. "ನೀನು ಕತ್ತೆಯನ್ನು ಮರಕ್ಕೆ ಕಟ್ಟಿದ್ದೀಯಲ್ಲ, ಅದನ್ನ ಮರದಿಂದ ಬಿಚ್ಚಿದೆಯಾ?" ಎಂದು ಕೇಳಿದ ಪಂಡಿತ. "ಇಲ್ಲ" ಎಂದ ಕುಂಬಾರ. "ಹೋಗು ಕತ್ತೆಯನ್ನು ಮರಕ್ಕೆ ಕಟ್ಟಿ ಹಾಕಿದ ಹಾಗೆಯೇ ಅದನ್ನು ಬಿಚ್ಚಿದ ಹಾಗೆ ಮಾಡು" ಎಂದ ಪಂಡಿತ. ಕುಂಬಾರ ಹೋಗಿ ಕತ್ತೆಯನ್ನು ಬಿಚ್ಚಿದ ಹಾಗೆ ಮಾಡಿದ. ಕೂಡಲೇ ಕತ್ತೆ ಅವನ ಮಾತನ್ನು ಕೇಳಿತು. ಕುಂಬಾರ ಕತ್ತೆಯನ್ನು ಹೊಡೆದುಕೊಂಡು ತನ್ನ ಮನೆಯತ್ತ ನಡೆದ.

**ಕತೆಯಲ್ಲಿನ ಪಾತ್ರಗಳು:**

ಕುಂಬಾರ, ಕತ್ತೆ ,ಪಂಡಿತ

ಪಂಡಿತ ಏನು ನಿನ್ನ ತೊಂದರೆ ಏಕೆ ಹೀಗೆ ಚಡಪಡಿಸುತ್ತಿರುವೆ.

ಕುಂಬಾರ ಏನು ಮಾಡಲಿ ಈ ದಿನ ಕತ್ತೆಯನ್ನು ಕಟ್ಟಿ ಹಾಕಲು ಹಗ್ಗವನ್ನು ತಂದಿಲ್ಲ ಈಗ ವಿಶ್ರಾಂತಿಯನ್ನು ಪಡೆಯಲು ಏನು ಮಾಡಬೇಕು ಹಗ್ಗ ಕಟ್ಟಲಿಲ್ಲ ಹಗ್ಗ ಕಟ್ಟದಿದ್ದರೆ ಕತ್ತೆ ತಪ್ಪಿಸಿಕೊಂಡು ಓಡಿ ಹೋಗುತ್ತದೆ ಏನು ಮಾಡಲಿ

ಪಂಡಿತ ನೀನು ಎಂದಿನಂತೆ ಕತ್ತೆಯನ್ನು ಮರದ ಬಳಿ ತೆಗೆದುಕೊಂಡು ಹೋಗಿ ನಿಲ್ಲಿಸು ಹಾಗೂ ಹಗ್ಗದಿಂದ ಅದನ್ನು ಕಟ್ಟಿದ ಹಾಗೆ ಮಾಡು

ಕುಂಬಾರ ಹಾಗೆಯೇ ಮಾಡಿದ

ಕುಂಬಾರ: ನನ್ನ ವಿಶ್ರಾಂತಿ ಮುಗಿಯಿತು ಈಗ ಕತ್ತೆಯನ್ನು ಮನೆಗೆ ಒಯ್ಯೋಣ ಎಂದರೆ ಅದು

ಬರುತ್ತಿಲ್ಲ ಏನು ಮಾಡಬೇಕು ಈಗ ಮತ್ತೊಂದು ಕಷ್ಟ ಎದುರಾಯಿತಲ್ಲ.

ಪಂಡಿತ: ನೀನು ಕತ್ತೆಯನ್ನು ಮರಕ್ಕೆ ಕಟ್ಟಿದ್ದೀಯಲ್ಲ ಅದನ್ನು ಮರದಿಂದ ಬಿಚ್ಚಿದಿಯಾ?

ಕುಂಬಾರ: ಇಲ್ಲ

ಪಂಡಿತ :ಹೋಗು ಕತ್ತೆಯನ್ನು ಮರಕ್ಕೆ ಕಟ್ಟಿ ಹಾಕಿದ ಹಾಗೆಯೇ ಅದನ್ನು ಬಿಚ್ಚಿದ ಹಾಗೆ ಮಾಡು.

ಕುಂಬಾರ :ಹಾಗೆಯೇ ಮಾಡಿದ ಕತ್ತೆ ಅವನ ಮಾತನ್ನು ಕೇಳಿತು.

## ನನ್ನ ಕಲಿಕೆ

| ಕ್ರ. ಸಂ | ಕಲಿಕೆ | ಸರಿ ಗುರುತು |
|---|---|---|
| 1 | ಸಾಹಿತ್ಯದ ಪ್ರಾಕಾರಗಳನ್ನು ಗುರುತಿಸುತ್ತೇನೆ. | |
| 2 | ಅಪೂರ್ಣ ಕಥೆಗಳನ್ನು ಪೂರ್ಣಗೊಳಿಸುತ್ತೇನೆ. | |
| 3 | ಕಥೆ/ಲೇಖನ/ನಾಟಕಗಳನ್ನು ಆಲಿಸಿ ಅರ್ಥಮಾಡಿಕೊಳ್ಳುತ್ತೇನೆ. | |
| 4 | ಆಲಿಸಿದ/ ಓದಿದ ಕಥೆ/ ನಾಟಕ/ ಕವನ/ ಲೇಖನಗಳಲ್ಲಿರುವ ಅಭಿಪ್ರಾಯದ ವ್ಯತ್ಯಾಸಗಳನ್ನು ಗುರ್ತಿಸುತ್ತೇನೆ. | |

. ಶಿಕ್ಷಕರ ಹಿಮ್ಮಾಹಿತಿ

ದಿನಾಂಕ: ಶಿಕ್ಷಕರ ಸಹಿ

## ಕಲಿಕಾಫಲ – 3

ತಾನು ಓದಿದ ಅಥವಾ ತಿಳಿದ ವಿಷಯ ವಸ್ತುವಿನ ಬಗ್ಗೆ ವೈಚಾರಿಕವಾಗಿ ವಿರ್ಮರ್ಶಿಸುತ್ತಾ ಏಕೆ? ಹೇಗೆ? ಏನು? ಎಂಬುದನ್ನು ಅರಿಯಲು ಪ್ರಯತ್ನಿಸುತ್ತಾರೆ ಅಥವಾ ಸಮೂಹದಲ್ಲಿ ಚರ್ಚಿಸುವರು.

### ಚಟುವಟಿಕೆ 1: ಸುದ್ದಿಗೊಂದು ಗುದ್ದು

**ಇಲ್ಲಿ ಕೊಟ್ಟಿರುವ 2 ಸುದ್ದಿಗಳನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸೋಣ.**



ಭಕ್ತಿಯಿಂದ ಮಿಂದೆದ್ದ ಭಕ್ತರು

ಮಿತ್ರವಾಣಿ ಪತ್ರಿಕೆ

ದಿನಾಂಕ 20/01/2023

ಇಂದು ಮಂಡ್ಯ ತಾಲೂಕಿನ ನಂಜ ಗ್ರಾಮದ ಐತಿಹಾಸಿಕ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ಜರುಗಿತು. ಈ ಜಾತ್ರೆಗೆ ಹಲವು ಗ್ರಾಮಗಳ ಜನರು ಬಂದು ಸೇರುತ್ತಾರೆ. ಈ ಪ್ರದೇಶದಲ್ಲಿ ಈ ಜಾತ್ರೆಗೆ ಹೆಚ್ಚಿನ ಸಾಂಸ್ಕೃತಿಕ ಮಹತ್ವವಿದೆ. 5 ದಿನಗಳ ಕಾಲ ನಡೆಯುವ ಈ ಜಾತ್ರೆಯ ಕೊನೆಯ ದಿನದಂದು ಬಚ್ಚಮ್ಮದೇವಿಗೆ ಜಾನುವಾರುಗಳನ್ನು ತಂದು ದೇವಿಗೆ ಸಮರ್ಪಿಸಿದ ನಂತರ ಅವರವರ ಮನೆಗಳಿಗೆ ತೆರಳಿ ಬಂಧು ಬಾಂಧವರಿಗೆ ಊಟ ಬಡಿಸುವುದು ವಾಡಿಕೆ. ಹಾಗೆಯೇ ಬಚ್ಚಮ್ಮ ದೇವಸ್ಥಾನದಲ್ಲಿ ಬೇವಿನ ಸೊಪ್ಪಿನ ಸಮಾರಾಧನೆ ನಡೆಯಲಿದ್ದು, ಪ್ರತಿ ಮಗುವಿಗೆ ಕಹಿ ಬೇವಿನ ರಸವನ್ನು ನೀಡಲಾಗುವುದು. ಹೀಗೆ ಕಹಿಯನ್ನು ಸೇವಿಸುವುದರಿಂದ ಮಕ್ಕಳಿಗೆ ಜ್ವರದಂತಹ ರೋಗಗಳು ಬರುವುದಿಲ್ಲ ಎಂಬುದು ಭಕ್ತರ ನಂಬಿಕೆ. ಇತ್ತೀಚಿನ ದಿನಗಳಲ್ಲಿ ಜಾತ್ರೆಗೆ ಬರುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದು ಊರಿನ ಹಿರಿಯರ ಅಭಿಪ್ರಾಯ. ಇಂದಿನ ಪೀಳಿಗೆಯವರು ಜಾತ್ರೆಯ ಬಗ್ಗೆ ಅಸಡ್ಡೆ ತೋರುತ್ತಿದ್ದಾರೆ. ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಿಳಿಸುವವರು ಹೆಚ್ಚು ಹೆಚ್ಚು ಜನಜಾತ್ರೆಯಲ್ಲಿ ಭಾಗವಹಿಸುವುದರಿಂದ ಜನರಲ್ಲಿ ಒಗ್ಗಟ್ಟು ಬೆಳೆಯುತ್ತದೆ ಎಂಬುದು ಹಿರಿಯರ ಅಭಿಪ್ರಾಯ. ಜಾತ್ರೆಗಳು ನಡೆಯುವುದರಿಂದ ಈ ಊರಿನ ಸ್ಥಳೀಯ ವ್ಯಾಪಾರಿಗಳ ವ್ಯಾಪಾರವೂ ಹೆಚ್ಚುತ್ತದೆ. ಈ ವರ್ತಕರು ವರ್ಷವಿಡೀ ಈ ಜಾತ್ರೆಗಾಗಿ ಕಾಯುತ್ತಾರೆ. ಹಾಗಾಗಿ ಈ ಜಾತ್ರೆಯ ವಿಶಿಷ್ಟತೆಯ ಬಗ್ಗೆ ಹೆಚ್ಚು ಹೆಚ್ಚು ಜಾಗೃತಿ ಮೂಡಿಸಬೇಕು ಎಂದು ದೇವಸ್ಥಾನದ ಅಧಿಕಾರಿಗಳು ತಿಳಿಸಿದರು.



ಮೂಢನಂಬಿಕೆಯ ಪರಮಾವಧಿ

ಸತ್ಯವಾಣಿ ಪತ್ರಿಕೆ

ದಿನಾಂಕ 20/01/2023

ಮಂಡ್ಯ ತಾಲೂಕಿನ ನಂಜ ಗ್ರಾಮದ ಐತಿಹಾಸಿಕ ದೇವಸ್ಥಾನದಲ್ಲಿ ಇಂದು ಜಾತ್ರೆ ಉತ್ಸವ ನಡೆಯಿತು. ಈ ಜಾತ್ರೆಗೆ ಹಲವು ಗ್ರಾಮಗಳ ಜನರು ಬಂದು ಸೇರುತ್ತಾರೆ. ಈ ಬಾರಿ ಜಾತ್ರೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಪ್ರಾಣಿಗಳನ್ನು ದೇವಿಗೆ ಬಲಿ ನೀಡಲಾಯಿತು. ಅನಕ್ಷರಸ್ಥರೇ ತುಂಬಿರುವ ಈ ಗ್ರಾಮದಲ್ಲಿ ಈ ರೀತಿಯ ಮೌಢ್ಯ ಆಚರಣೆಗಳು ಸರ್ವೇ ಸಾಮಾನ್ಯ ಎನ್ನುತ್ತಾರೆ ಇಲ್ಲಿನ ಸಾಮಾಜಿಕ ಸಂಘಟನೆ. ಅಲ್ಲದೆ ಜಾತ್ರೆಯಲ್ಲಿ ಬೇವಿನ ರಸವನ್ನು ಚಿಕ್ಕ ಮಕ್ಕಳಿಗೆ ತೀರ್ಥದ ಹೆಸರಿನಲ್ಲಿ ಕೊಡುತ್ತಾರೆ. ಇದು ಅನೇಕ ಮಕ್ಕಳಲ್ಲಿ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಅಲ್ಲದೆ ಜಾತ್ರೆಯ ಸಂದರ್ಭದಲ್ಲಿ ಸ್ವಚ್ಛತೆಯ ಕಡೆ ಗಮನ ಹರಿಸದ ಕಾರಣ ಜಾತ್ರೆ ಮುಗಿದ ನಂತರ ಊರೆಲ್ಲ ಕೊಳೆತು ನಾರುತ್ತದೆ. ಜಾತ್ರೆಯಲ್ಲಿ ಪ್ರತಿ ದಿನವೂ ಹಿಂಸಾಚಾರಕ್ಕೆ ತಿರುಗುವ ಗಲಾಟೆಗಳು ನಡೆಯುತ್ತವೆ. ಈ ಮೇಳವನ್ನು ದೊಡ್ಡ ವ್ಯಾಪಾರಿಗಳು ಆಯೋಜಿಸುತ್ತಾರೆ ಮತ್ತು ಹೆಚ್ಚು ಹೆಚ್ಚು ಜನರು ಬರಲು ಪ್ರೋತ್ಸಾಹಿಸುತ್ತಾರೆ. ಈ ಜಾತ್ರೆಯ ಹಿಂದೆ ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸಲು ಅವಕಾಶವಿದೆ ಎನ್ನುತ್ತಾರೆ ಈ ಊರಿನ ಹಿರಿಯರು.

1. ಈ ಎರಡು ಸುದ್ದಿಗಳಲ್ಲಿ ನಿಮ್ಮ ಪ್ರಕಾರ ಸರಿಯಾಗಿ ನಿರೂಪಿತವಾಗಿರುವ ಸುದ್ದಿ ಯಾವುದು? ಅದರ ಶೀರ್ಷಿಕೆಯನ್ನು ಗಮನದಲ್ಲಿರಿಸಿಕೊಂಡು ಉತ್ತರಿಸಿ.

ಎರಡು ಸುದ್ದಿಗಳಲ್ಲಿ ಸರಿಯಾಗಿ ನಿರೂಪಿತವಾಗಿರುವ ಸುದ್ದಿ ಎಂದರೆ ಭಕ್ತಿಯಿಂದ ಮಿಂದೆದ್ದ ಭಕ್ತರು ಇದರಲ್ಲಿ ಜಾತ್ರೆಯ ಬಗ್ಗೆ ಮತ್ತು ಜಾತ್ರೆ ಇತಿಹಾಸದ ಬಗ್ಗೆ ಇದ್ದರೂ ಜಾತ್ರೆ ಇತ್ತೀಚಿಗೆ ಜಾತ್ರೆಯಲ್ಲಿ ಅಸಡ್ಡೆ ಅಥವಾ ನಿರಾಸಕ್ತಿ ಮೂಡುತ್ತಿರುವುದು ಕೂಡ ಇದರಲ್ಲಿ ಬಿಂಬಿತವಾಗಿದೆ ಮತ್ತು ಜಾತ್ರೆಯಲ್ಲಿನ ಕೆಲವು ಆಚರಣೆಗಳು ಉತ್ತಮ ಆಚರಣೆಗಳು ಉತ್ತಮ ನಂಬಿಕೆಗಳು ಎಂಬ ಅಭಿಪ್ರಾಯ ವ್ಯಕ್ತವಾಗಿದೆ ಮತ್ತು ಇದು ಸರಿಯಾಗಿದೆ.

2. ನಿಮ್ಮ ಆಯ್ಕೆಯ ಸುದ್ದಿಯನ್ನು ನೀವು ಬೆಂಬಲಿಸುತ್ತಿರುವುದಕ್ಕೆ ಕಾರಣಗಳನ್ನು ಬರೆಯಿರಿ.

ನಮ್ಮ ಆಯ್ಕೆಯ ಸುದ್ದಿ ಭಕ್ತಿಯಿಂದ ಮಿಂದೆದ್ದ ಭಕ್ತರು ಇಲ್ಲಿ ಏಕೆಂದರೆ ಜಾತ್ರೆ ಜರುಗಿದ ಮೇಲೆ ಈ ಸುದ್ದಿ ಸರಿಯಾದ ಶೀರ್ಷಿಕೆಯೊಂದಿಗೆ ಕೊಟ್ಟಿದ್ದಾರೆ. ಅಲ್ಲಿನ ಆಚರಣೆಗಳಾದ ಜಾನುವಾರುಗಳನ್ನು ಸಮರ್ಪಿಸಿ ಬಾಂಧವರಿಗೆ ಊಟ ಹಾಕಿಸುವುದು ಮತ್ತು ಬೇವಿನ ಕಹಿಯ ರಸವನ್ನು ಮಕ್ಕಳಿಗೆ ಕೊಡಿಸುವುದು ಇದರಿಂದ ಖಾಯಿಲೆಗಳು ದೂರ ಆಗುವ ಸಂಗತಿ ಮತ್ತು ಇತ್ತೀಚೆಗೆ ಜಾತ್ರೆಗಳ ಬಗ್ಗೆ ಜನರ ನಿರಾಸಕ್ತಿ ಈ ಎಲ್ಲಾ ವಿಷಯಗಳು ತುಂಬಾ ಹಿಡಿಸಿವೆ.

## ಚಟುವಟಿಕೆ 2: ಚಿತ್ರಾಲೋಚನೆ

**ಚಿತ್ರವು ನಮಗೆ ಅರ್ಥೈಸಲು ಹೊರಟಿರುವುದನ್ನು ಆಲೋಚಿಸಿ ಬರೆಯೋಣ.**



ಈ ಚಿತ್ರದಲ್ಲಿ ಒಬ್ಬ ಮಾಂತ್ರಿಕನು ಕೈಯಲ್ಲಿ ಬೇವಿನ ಸೊಪ್ಪು ಹಿಡಿದುಕೊಂಡು ಒಬ್ಬ ಮಹಿಳೆಯ ಮಹಿಳೆಯ ಮೈಯಲ್ಲಿ ಬಂದಿರುವ ದೆವ್ವವನ್ನು ಅಥವಾ ಪಿಶಾಚಿಯನ್ನು ಓಡಿಸುವ ಕೆಲಸ ಮಾಡುತ್ತಿದ್ದಾನೆ. ಆದರೆ ಇದು ಮೂಢನಂಬಿಕೆಯ ಕೆಲಸವಾಗಿದೆ ಯಾವುದೊ ಅನಾರೋಗ್ಯಕ್ಕೆ ಅಥವಾ ಯಾವುದೋ ಮಾನಸಿಕ ಒತ್ತಡಕ್ಕೆ ಒಳಗಾಗಿ ಈ ಮಹಿಳೆ ಹಾಗಾಗಿ ಜನರ ಮೂಢನಂಬಿಕೆಯಿಂದ ಈ ರೀತಿ

ಮಾಂತ್ರಿಕರ ಬಳಿ ಹೋಗಿ ಮೈಯಲ್ಲಿರುವ ದೆವ್ವ ಅಥವಾ ಪಿಶಾಚಿಯನ್ನು ಓಡಿಸುವ ಕೆಲಸ ಮಾಡುತ್ತಾರೆ, ಇದರಿಂದ ಶರೀರಕ್ಕೆ ತೊಂದರೆಯಾಗುತ್ತದೆ ಮಾನಸಿಕ ಆಘಾತಕ್ಕೆ ಒಳಗಾಗುತ್ತಾರೆ ಮಹಿಳೆಯರು ನಮ್ಮ ಜನರ ತಪ್ಪು ನಂಬಿಕೆ ಇದಾಗಿದೆ.

**ಚಟುವಟಿಕೆ 3: ಸನ್ನಿವೇಶ ಅರಿಯೋಣ.**

**ಸನ್ನಿವೇಶವನ್ನು ಗಮನವಿಟ್ಟು ಓದಿ, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

### ಕನ್ನಡ ಕಹಳೆ

"ಒಂದು ಸಂಜೆ ಮನೆಯ ಎದುರಿಗೆ ಇದ್ದ ಶಾಲೆಯ ಬಳಿ ಕುಳಿತುಕೊಂಡು, ಎದುರು ದಿಕ್ಕಿನಿಂದ ಬರಬೇಕಾಗಿದ್ದ ಅಂದಿನ ಕೊನೆಯ ಬಸ್ಸಿನ ಪ್ರತೀಕ್ಷೆ ಮಾಡುತ್ತಿದ್ದೆ. ದಿನಕ್ಕೆ ಮೂರು ಸಾರಿ ಬಂದು ಹೋಗುತ್ತಿದ್ದ ಬಸ್ಸುಗಳೇ ನಮಗೆ ಆ ಚಿಕ್ಕ ಊರಿನ ದೊಡ್ಡ ಆಕರ್ಷಣೆಗಳಾಗಿದ್ದವು. ಬಸ್ಸು ಬಂತು, ಹೋಯಿತು. ಅದೇ ದಿಕ್ಕಿನಿಂದ ದೊಡ್ಡ ಗಂಟೊಂದನ್ನು ಹೊತ್ತುಕೊಂಡು ಮುದುಕರೊಬ್ಬರು ನಿಧಾನವಾಗಿ ನಡೆದು ಬರುತ್ತಿದ್ದರು.

ಯಾರೋ ಸೀರೇ-ಬಟ್ಟೆಗಳ ಮಾರುವವರಿರಬೇಕೆಂದು ಮನೆಯ ಹೆಂಗಸರಿಗೆ ವಿಷಯ ತಿಳಿಸಲು ಒಳಗೆ ಓಡಿದೆ. ಬಂದವರು ವ್ಯಾಪಾರಿ ನಿಜ. ಆದರೆ ಪುಸ್ತಕಗಳನ್ನು ಮಾರುವವರು. ಪುಸ್ತಕಗಳನ್ನು ಹೊತ್ತು ಮಾರುವುದು ನಾವು ಕಂಡು ಕೇಳದ ಸಂಗತಿ. ವ್ಯಾಪಾರಿಗೋ ಇಳಿ ವಯಸ್ಸು. ಮೈಯೆಲ್ಲ ಧೂಳು ಕೆಂಪು. ಪುಸ್ತಕಗಳೊ ಮಹಾಭಾರ. ಮನೆಯವರಿಗೆಲ್ಲ ಅವರಲ್ಲಿ ಸಹಾನುಭೂತಿ, ಆ ಪುಸ್ತಕಗಳನ್ನು ಬರೆದವರು ಆ ಮುದುಕರೇ! ಇದೀಗ ಆಶ್ಚರ್ಯ. ಎಲ್ಲರಲ್ಲೂ ಗೌರವ ಮೂಡಿತು. ಎಲ್ಲರೂ ಮೂಕರೇ ಆ ಹೊತ್ತು."

ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳಾದ ಡಾ.ಹಾ.ಮಾ. ನಾಯಕರು, ತಾವು ಏಳೆಂಟು ವರ್ಷದ ಬಾಲಕರಾಗಿರುವಾಗ, ತಮ್ಮೂರಿಗೆ ಪುಸ್ತಕ ಮಾರಲು ಬಂದ ಗಳಗನಾಥರನ್ನು ಕಂಡ ಪರಿಯನ್ನು ಈ ರೀತಿ ಚಿತ್ರಿಸಿದ್ದಾರೆ.

(ಸಂಗ್ರಹ:- ಡಾ. ಪರಮೇಶ್ವರಯ್ಯ ಸೊಪ್ಪಿಮಠ)

1. ಈ ಸನ್ನಿವೇಶದಲ್ಲಿ ಏನೆಲ್ಲಾ ಅಂಶಗಳನ್ನು ಗಮನಿಸಿದಿರಿ?

ಈ ಸನ್ನಿವೇಶದಲ್ಲಿ ಬಸ್ಸು ಆಗಿನ ಮುಖ್ಯ ಆಕರ್ಷಣೆ ಮತ್ತು ವ್ಯಾಪಾರಗಾರರು ಹಳ್ಳಿಗಳನ್ನು ಸಂಧಿಸುತ್ತಿದ್ದದ್ದು. ಆದರೆ ಒಬ್ಬ ಕವಿಯಾದ ಗಳಗನಾಥರು ಇನ್ನೊಬ್ಬ ಪ್ರಸಿದ್ಧ ಸಾಹಿತಿ ಹಾ ಮಾ ನಾಯಕರ ಭೇಟಿಯ ಸಂದರ್ಭ, ಗಳಗನಾಥರು ಪುಸ್ತಕ ಮಾಡಿಕೊಂಡು ಬಂದ ಸಂದರ್ಭ, ಇಷ್ಟೆಲ್ಲ ಸಂದರ್ಭಗಳು ಇಷ್ಟೆಲ್ಲಾ ಅಂಶಗಳು ಸನ್ನಿವೇಶದಲ್ಲಿವೆ.

2. ಗಳಗನಾಥರ ಬಗ್ಗೆ ನಿಮ್ಮಲ್ಲಿ ಮೂಡಿದ ಭಾವನೆಗಳೇನು?

ಗಳಗನಾಥರ ಈ ಅಪರೂಪದ ಸಾಹಿತಿ ಎನಿಸಿದ್ದಾರೆ ಏಕೆಂದರೆ ತಾವೇ ಬರೆದ ಪುಸ್ತಕಗಳನ್ನು ಹಳ್ಳಿಹಳ್ಳಿಗೆ ಮಾರುತ್ತ ಹೋಗಿರುವುದು ತುಂಬಾ ಸಂಗತಿ ಮತ್ತು ಅವರ ತಮ್ಮದೇ ಪುಸ್ತಕಗಳನ್ನು ಮಾರುವ ಪರಿ ಆಶ್ಚರ್ಯ ಮತ್ತು ಗೌರವ ಮೂಡಿಸಿದೆ.

3. ನಿಮ್ಮ ಗೆಳೆಯ/ಗೆಳತಿ ನಿನಗೆ ಪುಸ್ತಕ ಓದಲು ಸಹಾಯ ಮಾಡಿದರೆ ನೀವು ಅವರನ್ನು ಹೇಗೆ ಪ್ರಶಂಸಿಸುವಿರಿ?

ನನ್ನ ಗೆಳೆಯ ಅಥವಾ ಗೆಳತಿ ಪುಸ್ತಕ ಓದಲು ಸಹಾಯ ಮಾಡಿದರೆ ನಾನು ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಮತ್ತು ಅವರನ್ನು ಗೌರವಿಸುತ್ತೇನೆ ಮತ್ತು ಅವರಿಗೆ ಸ್ನೇಹ ಭಾವದಿಂದ ಅವರಿಗೆ ಋಣಿಯಾಗಿರುತ್ತೇನೆ ಮತ್ತು ಅವರ ಯಾವುದಾದರೂ ಕೆಲಸವನ್ನು ನನ್ನಿಂದಾದರೆ ಮಾಡಿಕೊಡುತ್ತೇನೆ.

4. ನೀವು ಇತರರಿಗೆ ಪುಸ್ತಕ ಓದಲು ಸಹಾಯ ಮಾಡಿರುವ ಸಂದರ್ಭವನ್ನು ಕುರಿತು ಪಟ್ಟಿಮಾಡಿರಿ.

ನನ್ನ ಸ್ನೇಹಿತನಾದ ಎಂ ಎನ್ ಆನಂದನಿಗೆ ಸರಿಯಾಗಿ ಓದಲು ಬರುವುದಿಲ್ಲ ನಮ್ಮ ಶಿಕ್ಷಕರು ಅವನಿಗೆ ಓದಲು ಸಹಾಯ ಮಾಡಲು ತಿಳಿಸುತ್ತಾರೆ ಹಾಗೆಲ್ಲ ನಾನು ಅವನು ಅಕ್ಷರಗಳನ್ನು ಗುರುತಿಸುವಲ್ಲಿ ಮತ್ತು ಪದಗಳನ್ನು ಓದುವಲ್ಲಿ ತಿದ್ದಿ ಸಹಾಯ ಮಾಡುತ್ತೇನೆ.

5 ಪ್ರಸ್ತುತ ದಿನಗಳಲ್ಲಿ ಪುಸ್ತಕ ಮಾರಾಟವು ಒಂದು ಆಕರ್ಷಕ ಕ್ಷೇತ್ರವಾಗಿ ಉಳಿದಿಲ. ಈ ಬಗೆ ನಿಮ ಅಭಿಪ್ರಾಯವೇನು?

ಹೌದು ಈಗಿನ ಪ್ರಸ್ತುತ ಸನ್ನಿವೇಶದಲ್ಲಿ ಪುಸ್ತಕ ಮಾರಾಟವು ಅಷ್ಟೊಂದು ಆಕರ್ಷಕ ಕ್ಷೇತ್ರವಾಗಿ ಉಳಿದಿಲ್ಲ ಏಕೆಂದರೆ ಈಗ ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆಯಾಗಿದೆ ಈಗಿನ ಮೊಬೈಲ್ ಮತ್ತು ಟಿವಿ ಮತ್ತು ಇತರ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಕ್ರಾಂತಿ ಆಗಿರುವುದರಿಂದ ಪುಸ್ತಕಗಳನ್ನು ಕೊಳ್ಳುವುದನ್ನು ಜನರು ಬಿಟ್ಟಿದ್ದಾರೆ.

## ಚಟುವಟಿಕೆ 4: ಕೊಂಚ ಯೋಚಿಸೋಣ.

**ಇಂತಹ ಪರಿಸ್ಥಿತಿಯಲ್ಲಿ ನಾವು ಹೇಗೆ ವರ್ತಿಸಬಹುದು?**



ಇದು ಅಪಘಾತದ ಸನ್ನಿವೇಶವಾಗಿದೆ ಕೆಲವೊಮ್ಮೆ ಅಪಘಾತ ಉಂಟಾಗಿರುತ್ತದೆ ಆಗ ನಾವು ಪರಿಸ್ಥಿತಿಯನ್ನು ಗಮನಿಸಬೇಕು ಅಲ್ಲಿ ಒಳಗಡೆ ಕಾರಿನ ಪ್ರಯಾಣಿಕರು ಅಥವಾ ವಾಹನದ ಪ್ರಯಾಣಿಕರು ಹೇಗಿದ್ದಾರೆ ಎನ್ನುವುದನ್ನು ಗಮನಿಸಬೇಕು ಅವರಿಗೆ ಅಗತ್ಯ ಸಹಾಯ ಮಾಡಬೇಕು ಅಥವಾ ಬೇರೆ ವಾಹನಗಳಲ್ಲಿ ಅವರನ್ನು ಆಸ್ಪತ್ರೆಗೆ ಸಾಗಿಸುವ ಕೆಲಸ ಮಾಡಬೇಕು ಪೊಲೀಸ್ ಅಥವಾ ಆಂಬುಲೆನ್ಸ್ ಅಥವಾ ಅಗ್ನಿಶಾಮಕ ಇಲಾಖೆಗೆ ಅಗತ್ಯವಿದ್ದಲ್ಲಿ ಫೋನ್ ಮಾಡಿ ಮಾಹಿತಿ ತಿಳಿಸಬೇಕು, ಅಲ್ಲಿಯೇ ಏನಾದರೂ ಪ್ರಥಮ ಚಿಕಿತ್ಸೆಯ ಅಗತ್ಯವಿದ್ದರೆ ನಮ್ಮ ಕೈಲಾದಷ್ಟು ಪ್ರಥಮ ಚಿಕಿತ್ಸೆ ಮಾಡಬೇಕು.

## ಚಟುವಟಿಕೆ 5: ವಿಷಯ ಸಂಗ್ರಹ

**ಚಿತ್ರ ಗಮನಿಸಿ ಅದಕ್ಕೆ ಪೂರಕ ವಿಷಯ ಸಂಗ್ರಹಿಸಿ, ಸಹಪಾಠಿಗಳೊಂದಿಗೆ ಚರ್ಚಿಸಿ, ಒಂದು ಚಿಕ್ಕ ಕಥೆ ಹೇಳಿ.**



**ಸಂಗ್ರಹಿಸಿದ ವಿಷಯಗಳು:**

ಗಂಡು ಅಥವಾ ಹೆಣ್ಣು ಎನ್ನುವ ತಾರತಮ್ಯ ಬೇಡ ಮಗ ಅಥವಾ ಮಗಳು ಎನ್ನುವ ತಾರತಮ್ಯ ಬೇಡ ಪ್ರತಿಯೊಂದು ಕೆಲಸದಲ್ಲೂ ಕೂಡ ಸಮಾನವಾಗುವ ಸಮಾನವಾದ ಜವಾಬ್ದಾರಿಯನ್ನು ಹಂಚಬೇಕು ಗಂಡು-ಹೆಣ್ಣು ಹಿತಮಿತವಾಗಿ ಸರಿದೂಗಿಸಿಕೊಂಡು ಹೋಗಬೇಕು.

**ಕಥೆರಚನೆ:**

ರಾಜು ಮತ್ತು ಸುಮಾ ಅಣ್ಣ ತಂಗಿಯಾಗಿದ್ದಾರೆ ಅವರ ತಂದೆ ತಾಯಿ ರಾಜವಿಗೆ ವಿದ್ಯಾಭ್ಯಾಸ ಮಾಡಲು ಪ್ರೋತ್ಸಾಹ ಕೊಡುತ್ತಾರೆ ಆದರೆ ಅವನ ತಂಗಿ ಸುಮಗೆ ಮನೆ ಕೆಲಸ ಮಾಡಲು ಪ್ರೋತ್ಸಾಹಿಸುತ್ತಾರೆ ವಿದ್ಯಾಭ್ಯಾಸಕ್ಕೆ ಅಷ್ಟು ಗಮನ ಕೊಡುವುದಿಲ್ಲ ಇದನ್ನು ಗಮನಿಸಿದ ಅವರ ಶಿಕ್ಷಕರು ರಾಜುವಿನ ತಂದೆ ತಾಯಿಯನ್ನು ಕರೆದು ಅವರಿಗೆ ಬುದ್ಧಿ ಹೇಳಿದರು ಮಗನಿಗೆ ಎಷ್ಟು ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ಕೊಡುತ್ತಿರುವ ಮಗಳಿಗೂ ಅಷ್ಟೇ ಕೊಡಿ ರಾಜು ಮತ್ತು ಸೋಮ ಇಬ್ಬರಿಗೂ ಮನೆಯ ಕೆಲಸವನ್ನು ಹಂಚಿ ಎಂದು ಬುದ್ಧಿ ಹೇಳಿದರು.

## ಚಟುವಟಿಕೆ 6: ಅಂಟು-ಹಲ್ಲಿ

**ಈ ಮಾಹಿತಿಯನ್ನು ಓದಿ, ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿ.**

"ಅಮ್ಮಾ" ಪುಟ್ಟ ಇನ್ನೊಮ್ಮೆ ಕೂಗಿದ. "ಈ ಹಲ್ಲಿ ಗೋಡೆಯ ಮೇಲೆ ಅಷ್ಟು ಸುಲಭವಾಗಿ ಓಡಾಡುವುದು ಹೇಗೆ?"

"ಅದರ ಪಾದದಲ್ಲಿ ಸ್ಟಿಕರ್ ಥರ ಅಂಟು ಇರುತ್ತಂತೆ ಕಣೋ, ಅದು ಇರೋದ್ರಿಂದಲೇ ಹಲ್ಲಿ ಎಲ್ಲಿ ಬೇಕಾದರೂ ಓಡಾಡಬಹುದು ಅಂತ ಸ್ಕೂಲಲ್ಲಿ ನಮ್ಮ ಅಕ್ಕ ಹೇಳಿದ್ರು," ಅಮ್ಮನಿಗಿಂತ ಮೊದಲು ಪುಟ್ಟಿಯೇ ಉತ್ತರಿಸಿದಳು.

"ಪಾದದಲ್ಲಿ ಸ್ಟಿಕರ್ ಇದೆಯಾ?" ಪುಟ್ಟ ಕೇಳಿದ, "ನಮಗೂ ಆಥರಾ ಸ್ಟಿಕರ್ ಹಾಕಿಬಿಟ್ಟರೆ ನಾವು ನಡೆದಾಡುವುದು ಹೇಗೆ?"

"ಹಲ್ಲಿಯ ಪಾದದ ಅಂಟು, ಸ್ಟಿಕರ್‌ನ ಅಂಟು ಎರಡೂ ಬೇರೆಬೇರೆ ರೀತಿಯವು." ಅಮ್ಮ ಹೇಳಿದರು. ಅವರಿಗೆ ಹಲ್ಲಿ ಕಂಡರೆ ಭಯವಾದರೂ ಜೀವವಿಜ್ಞಾನದ ಬೇಕಾದಷ್ಟು ವಿಷಯಗಳು ಗೊತ್ತಿವೆ.

"ಹಲ್ಲಿಯ ಪಾದದ ಅಡಿಯಲ್ಲಿ ಕೂದಲಿಗಿಂತ ತೆಳ್ಳಗಿರುವ ಸೆಟೀ (setae) ಎಂಬ ರಚನೆಗಳಿರುತ್ತವೆ. ಹಲ್ಲಿಯು ಗೋಡೆಗೆ ಅಥವಾ ಸೂರಿಗೆ ಸರಾಗವಾಗಿ ಅಂಟಿಕೊಳ್ಳಲು ಅದಕ್ಕೆ ಈ ರಚನೆಗಳೇ ಸಹಾಯ ಮಾಡುತ್ತವೆ. ಕಾಲು ಎತ್ತಿದರೆ ಅಂಟು ಬಿಡುತ್ತದೆ, ಮತ್ತೆ ಇಟ್ಟ ತಕ್ಷಣ ಅಂಟಿಕೊಂಡು ಬಿಡುತ್ತದೆ!"

ಪುಟ್ಟ ಪುಟ್ಟಿ ಆಸಕ್ತಿಯಿಂದ ಕೇಳುತ್ತಿದ್ದರು.

**– ಟಿ.ಜಿ. ಶ್ರೀನಿಧಿ, ಪುಟ್ಟ ಪುಟ್ಟಿಯ ಪರಿಸರ ಕಥೆಗಳು**

ಓದಿದ ವಿಷಯ ಕುರಿತು ಮಾಹಿತಿ ಸಂಗ್ರಹಿ...

**ಮೇಲಿನ ಮಾಹಿತಿಯಲ್ಲಿ ಹಲ್ಲಿ ಏಕೆ ಗೋಡೆಯ ಮೇಲೆ ನಡೆದಾಡುತ್ತದೆ ಮತ್ತು ಅದು ಏಕೆ ಕೆಳಗೆ ಬೀಳುವುದಿಲ್ಲ ಎಂಬ ವಿಷಯ ಇದೆ ಅಲ್ಲಿಯ ಪಾದದಲ್ಲಿ ತೆಳ್ಳಗಿರುವ ಸಿಟಿ ಎಂಬ ರಚನೆಗಳಿರುತ್ತವೆ ಈ ರಚನೆಗಳೇ ಅಲ್ಲಿ ಓಡಾಡಲು ಸಹಾಯ ಮಾಡುತ್ತದೆ ಎಂಬುದು ತಿಳಿಯುತ್ತದೆ.**

ನೀವು ನೋಡಿರುವ ಸಣ್ಣ ಕೀಟ-ಜೀವಿಗಳ ಬಗ್ಗೆ ಇದೇ ಮಾದರಿಯಲಿ ಕಿರುಟಿಪ್ಪಣಿ ಬರೆಯಿರಿ

**ಇರುವೆಗಳು ನಮ್ಮ ಜೀವನದಲ್ಲಿ ಅವು ಕೂಡ ಇವೆ ಇರುವೆಗಳಲ್ಲಿ ಬಹಳಷ್ಟು ವಿಧ ಕೆಂಪು ಇರುವೆಗಳು ಅಪಾಯ ಕಪ್ಪು ಇರುವೆಗಳು ಅಪಾಯವಲ್ಲ. ಅವು ತಮ್ಮ ಆಹಾರಕ್ಕಾಗಿ ನಮ್ಮ ಮನೆಗಳಲ್ಲಿ ಬರುತ್ತದೆ. ಕೆಲವು ಕಪ್ಪು ಮಿಶ್ರಿತ ಕೆಂಪು ಬಣ್ಣದ ಆಗಿರುತ್ತವೆ ಇನ್ನು ಕೆಲವು ಬಹಳಷ್ಟು ಸೂಕ್ಷ್ಮ ಇರುವೆಗಳಾಗಿರುತ್ತವೆ. ಜಗಳೀ ಇರುವೆಗಳು ತೋಟಗಳಲ್ಲಿ ವಾಸಿಸುತ್ತವೆ.**

### ನನ್ನ ಕಲಿಕೆ

| ಕ್ರ. ಸಂ | ಕಲಿಕೆ | ಸರಿ ಗುರುತು |
|---|---|---|
| 1 | ಒಂದು ಘಟನೆ ದೃಶ್ಯವನ್ನು ಕ್ರಿಯಾತ್ಮಕವಾಗಿ ಪೋಸ್ಟರ್ ಘೋಷವಾಕ್ಯ ಇತ್ಯಾದಿಗಳ ಮೂಲಕ ಅಭಿವ್ಯಕ್ತಿಸುತ್ತೇನೆ. | |
| 2 | ಒಂದು ಘಟನೆ ದೃಶ್ಯವನ್ನು ಕ್ರಿಯಾತ್ಮಕವಾಗಿ ಸರಣಿ ರೂಪದಲ್ಲಿ ನಿರೂಪಿಸುತ್ತೇನೆ. | |
| 3 | ನಾನು ಅಪರಿಚಿತ ಸನ್ನಿವೇಶದ ದೃಶ್ಯವನ್ನು ಕೂಡ ಅರ್ಥೈಸುವ ಪ್ರಯತ್ನ ಮಾಡುತ್ತೇನೆ. | |
| 4 | ಚಿತ್ರ ದೃಶ್ಯದಲ್ಲಿರುವ ಅಂಶಗಳನ್ನು ಪಾತ್ರಗಳನ್ನು ನಿಖರವಾಗಿ ಗುರುತಿಸುತ್ತೇನೆ. | |

**ಶಿಕ್ಷಕರ ಹಿಮ್ಮಾಹಿತಿ**

**ದಿನಾಂಕ:**

**ಶಿಕ್ಷಕರ ಸಹಿ**